# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 856 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2021 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆಯಿಂದ (ಎಂ.ಎಸ್.ಪಿ) ಭತ್ತ ಖರೀದಿಸಲು ಯಾವ ದಿನಾಂಕದಿಂದ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ; ಪ್ರತಿ ಕ್ವಿಂಟಾಲಿಗೆ ನಿಗದಿಪಡಿಸಿದ ಬೆಂಬಲ ದರವೆಷ್ಟು; | ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ದಿನಾಂಕ:08-12-2020 ರಿಂದ ಭತ್ತ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.<br>ಕೇಂದ್ರ ಸರ್ಕಾರವು 2020-21 ನೇ ಸಾಲಿನ ಮುಂಗಾರು ಋತುವಿನಲ್ಲಿ ಭತ್ತಕ್ಕೆ ಈ ಕೆಳಗಿನಂತೆ ಖರೀದಿ ದರವನ್ನು ನಿಗದಿಪಡಿಸಿದೆ.<br>ತಳಿ — ಭತ್ತದ ದರ ಪ್ರತಿ ಕ್ವಿಂಟಾಲ್ ಗೆ<br>ಸಾಮಾನ್ಯ — 1868-00<br>ಗ್ರೇಡ್-ಎ — 1888-00 |
| ಆ | ಸರ್ಕಾರ ಎಷ್ಟು ಮೆಟ್ರಿಕ್ ಟನ್ ಭತ್ತ ಖರೀದಿಸಲು ಅಂದಾಜಿಸಲಾಗಿದೆ; ಇದುವರೆವಿಗೂ ಎಷ್ಟು ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಪ್ರಸ್ತುತ 12.10 ಲಕ್ಷ ಮೆ.ಟನ್ ಭತ್ತವನ್ನು ಖರೀದಿಸಲು ಆದೇಶಿಸಲಾಗಿದೆ. ಸದರಿ ಪ್ರಮಾಣವನ್ನು 18.01 ಲಕ್ಷ ಮೆ.ಟನ್‌ಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ದಿನಾಂಕ 06-03-2021 ರಲ್ಲಿದ್ದಂತೆ 159854.917 ಮೆ.ಟನ್ ಭತ್ತವನ್ನು ರೈತರಿಂದ ಖರೀದಿಸಲಾಗಿದೆ. ಜಿಲ್ಲಾವಾರು ವಿವರ ಅನುಬಂಧ-1 ಮತ್ತು 2 ರಲ್ಲಿ ಒದಗಿಸಲಾಗಿದೆ. |
| ಇ | ಈಗಾಗಲೇ ಖರೀದಿಸಲಾಗಿರುವ ಭತ್ತಕ್ಕೆ ಇದುವರೆವಿಗೂ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು; ಬಿಡುಗಡೆಗೊಳಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ದಿನಾಂಕ:06.03.2021ರಲ್ಲಿದ್ದಂತೆ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾದ ಭತ್ತಕ್ಕೆ ಸಂಬಂಧಿಸಿದಂತೆ ಎರಡು ಸಂಗ್ರಹಣಾ ಏಜೆನ್ಸಿಗಳಾದ ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಗಳಿಂದ ಒಟ್ಟು ರೂ.162.57 ಕೋಟಿಗಳನ್ನು ರೈತರಿಗೆ ಪಾವತಿಸಲಾಗಿದೆ. ರಾಜ್ಯದ ರೈತರಿಂದ ಭತ್ತವನ್ನು ಖರೀದಿಸಲು ದಿನಾಂಕ:07.03.2021 ಕಡೆಯ ದಿನಾಂಕವಾಗಿದ್ದು, ಸದರಿ ದಿನಾಂಕವನ್ನು 31.03.2021 ರವರೆಗೆ ವಿಸ್ತರಿಸಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಭತ್ತ ಖರೀದಿಗೆ ಸಂಬಂಧಿಸಿದಂತೆ ರೈತರಿಗೆ ಪಾವತಿಸಲಾದ ಮೊತ್ತದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ | 2018-19ನೇ ಸಾಲಿನಲ್ಲಿ ಕಾಸ್ಟಿಂಗ್ ಶೀಟ್ ಕರಾರಿನ ಪ್ರಕಾರ ರೈಸ್ ಮಿಲ್ ಮಾಲೀಕರಿಗೆ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2018-19 ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗಿರುವ ಭತ್ತಕ್ಕೆ ಸಂಬಂಧಿಸಿದಂತೆ ಡ್ರೈಯೆಜ್ ಶುಲ್ಕ ಪಾವತಿಸುವುದನ್ನು ಹೊರತುಪಡಿಸಿ ಉಳಿದ ಪೂರ್ಣ ಮೊತ್ತವನ್ನು ಅಕ್ಕಿ ಗಿರಣಿ ಮಾಲೀಕರಿಗೆ ಪಾವತಿಸಲಾಗಿದೆ. |
| ಉ | 2019-20ನೇ ಸಾಲಿನ ಕಾಸ್ಟಿಂಗ್ ಶೀಟ್ ಪ್ರಕಾರ ರೈಸ್ ಮಿಲ್ ಮಾಲೀಕರಿಗೆ ಇದುವರೆವಿಗೂ ಹಣ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪಾವತಿ ಮಾಡಬೇಕಾಗಿರುವ ಒಟ್ಟು ಮೊತ್ತವೆಷ್ಟು; | 2019-20ನೇ ಸಾಲಿನಲ್ಲಿ ಭತ್ತದ ಹಲ್ಲಿಂಗ್‌ಗೆ ಸಂಬಂಧಿಸಿದಂತೆ ಈಗಾಗಲೇ ಅಕ್ಕಿ ಗಿರಣಿ ಮಾಲೀಕರಿಗೆ ಹಣವನ್ನು ಪಾವತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಒಟ್ಟು ರೂ. 5,93,16,550.00 ಮೊತ್ತ ಬಿಡುಗಡೆಗೆ ಬಾಕಿ ಇರುತ್ತದೆ. |
| ಊ | ರೈಸ್ ಮಿಲ್ ಮಾಲೀಕರಿಗೆ ಪ್ರತಿ ಕ್ವಿಂಟಾಲ್‌ಗೆ ನೀಡಲಾಗುತ್ತಿರುವ ಹಲ್ಲಿಂಗ್ ಚಾರ್ಜ್ ದರವೆಷ್ಟು ಹಾಗೂ ಸದರಿ ದರವನ್ನು ಯಾವ ದಿನಾಂಕದಿಂದ ಪರಿಷ್ಕರಿಸಲಾಗಿದೆ? (ವಿವರಗಳೊಡನೆ ಮಾಹಿತಿ ನೀಡುವುದು) | ಪ್ರತಿ ಕ್ವಿಂಟಾಲ್ ಭತ್ತವನ್ನು ಹಲ್ಲಿಂಗ್ ಮಾಡಲು ರೂ.10/-ಗಳನ್ನು ರೈಸ್‌ಮಿಲ್ ಮಾಲೀಕರಿಗೆ ಹಲ್ಲಿಂಗ್ ವೆಚ್ಚವಾಗಿ ನೀಡಲಾಗುತ್ತಿದೆ. ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತದ ಸಂಗ್ರಹಣೆ ಹಲ್ಲಿಂಗ್‌ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ದರವನ್ನು ನಿಗಧಿಪಡಿಸುತ್ತದೆ. 2010-11ನೇ ಸಾಲಿನಿಂದ ಇಲ್ಲಿಯವರೆಗೆ ಹಲ್ಲಿಂಗ್ ವೆಚ್ಚದಲ್ಲಿ ಯಾವುದೇ ಪರಿಷ್ಕರಣೆಯಾಗಿರುವುದಿಲ್ಲ. |

ಆನಾಸ 21 ಆರ್‌ಪಿಆರ್ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

LAQ- 856 
Annexure - 1

KARNATAKA STATE CO OPERATIVE MARKETING FEDERATION LIMITED.,

PAYMENT DETAILS OF PADDY, RAGI & JOWAR PURCHASED UNDER M S P 2020-2021

As On 06.03.2021

| Sl No | District | PADDY Procurement | | | Payment | | Pending | |
|---|---|---|---|---|---|---|---|---|
| | | Procured Qty(MTs) | Value in Crores | No of Farmers | Value in Crores | No of Farmers | Value in Crores | No of Farmers |
| 1 | Belagavi | 0.000 | 0.00 | 0 | 0.00 | 0 | 0.00 | 0 |
| 2 | Chamarajnagar | 663.702 | 1.24 | 182 | 0.94 | 138 | 0.30 | 44 |
| 3 | Chikmagaluru | 341.275 | 0.64 | 127 | 0.12 | 26 | 0.52 | 101 |
| 4 | Dharawada | 0.000 | 0.00 | 0 | 0.00 | 0 | 0.00 | 0 |
| 5 | Gadaga | 0.000 | 0.00 | 0 | 0.00 | 0 | 0.00 | 0 |
| 6 | Hassan | 5015.784 | 9.40 | 1543 | 5.07 | 781 | 4.33 | 762 |
| 7 | Kodagu | 2189.985 | 4.10 | 522 | 2.50 | 306 | 1.60 | 216 |
| 8 | Mandya | 73370.777 | 137.50 | 23567 | 94.55 | 16073 | 42.95 | 7494 |
| 9 | Mysuru | 52150.002 | 97.73 | 13852 | 21.02 | 2934 | 76.71 | 10918 |
| | | **133731.525** | **250.61** | **39793** | **124.20** | **20258** | **126** | **19535** |

Annexure-2 LAQ 856

KARNATAKA FOOD & CIVIL SUPPLIES CORPORATION LTD.,

PAYMENT DETAILS OF PADDY, RAGI & JOWAR PURCHASED UNDER M S P 2020-2021

As On 06.03.2021

| Sl No | District | PADDY | | | Payment | | Pending | |
|---|---|---|---|---|---|---|---|---|
| | | Procured Qty(MTs) | Value in Crores | No of Farmers | Value in Crores | No of Farmers | Value in Crores | No of Farmers |
| 1 | Ballary | 6831.900 | 12.80 | 1034 | 10.55 | 942 | 2.25 | 92 |
| 2 | Davanagere | 5511.090 | 10.33 | 1032 | 7.58 | 760 | 2.75 | 272 |
| 3 | Dakshinakannada | 0.000 | 0.00 | 0 | 0.00 | 0 | 0.00 | 0 |
| 4 | Haveri | 8268.882 | 15.50 | 1522 | 12.80 | 1251 | 2.70 | 271 |
| 5 | Karwara | 204.738 | 0.38 | 53 | 0.29 | 39 | 0.09 | 14 |
| 6 | Koppala | 56.128 | 0.11 | 12 | 0.11 | 12 | 0.00 | 0 |
| 7 | Raichuru | 37.500 | 0.07 | 5 | 0.07 | 5 | 0.00 | 0 |
| 8 | Ramanagara | 511.760 | 0.96 | 211 | 0.89 | 193 | 0.07 | 18 |
| 9 | Shivamogga | 4665.093 | 8.74 | 966 | 6.01 | 670 | 2.73 | 296 |
| 10 | Udupi | 0.000 | 0.000 | 0 | 0.00 | 0 | 0.00 | 0 |
| 11 | Yadagiri | 37.301 | 0.07 | 8 | 0.07 | 8 | 0.00 | 0 |
| | | **26124.392** | **48.96** | **4843** | **38.37** | **3880** | **10.59** | **963** |